ಇದು ನನ್ನ ಗೆಳೆಯನ ಕತೆ. ಅವನು ಅನಿವಾರ್ಯವಾಗಿ ಹೇಳಲಾಗದ ಕಾರಣ ನಿರೂಪಕನಾಗಿ ನಾನು ನಿಮ್ಮ ಮುಂದೆ ಬಂದಿದ್ದೇನೆ. ಕನ್ಯಾ ನೋಡಲು ಹೋಗಿ ಇಂಥದ್ದನ್ನು ನೀವೂ ಕಂಡಿರಬಹುದು. ಇದಕ್ಕಿಂತ ಅದ್ಭುತ ಅನುಭವ ನಿಮಗೂ ತಟ್ಟಿರಬಹುದು. ಎಂಗೇಜ್ಮೆಂಟ್ ಹಿಂದೆ ಮುಂದೆ ಗಡಿಬಿಡಿ, ಅವಗಡ, ತಪ್ಪು ತಿಳಿವಳಿಕೆ ಎಲ್ಲಾ ಇದ್ದವೇನೆ. ಗೆಳೆಯನ ಫಜೀತಿಯನ್ನು ಇದ್ದದ್ದನ್ನು ಇದ್ದಂತೆ ಹೇಳದೆ, ಬಿಸಿತುಪ್ಪಕ್ಕೆ ಸಾಸಿವೆ, ಜೀರಿಗೆ, ಕರಿಬೇವಿನ ಸೊಪ್ಪು, ಬೆಳ್ಳುಳ್ಳಿ, ಬ್ಯಾಡಗಿ ಮೆಣಸಿನಕಾಯಿಯ ಘಮಲನ್ನು ಸೇರಿಸಿರುವೆ. ಕರುನಾಡ ಒಂದು ತುದಿಯಲ್ಲಿ ನಡೆದ ಘಟನೆಯಿದು.

ಇರೋನು ಒಬ್ಬನೇ ಮಗ. ಒಳ್ಳೇ ಕಡೆ ಹೆಣ್ಣು ನೋಡಬೇಕೂಂತ ಗಂಗವ್ವನ ಆಸೆ. ಸಿಕ್ಕವರಿಗೆಲ್ಲಾ, "ಗುಡ್ಡಪ್ಪನಿಗೆ ಸರ್ಕಾರಿ ನೌಕರಿ ಸಿಕ್ಕೈತಿ ಚಲೋ ಕಡೀನೆ ಆಗ್ಬೇಕು" ಎಂದು ಗತ್ತಿನಲ್ಲೇ ಹೇಳಿಕೊಂಡಿದ್ದಳು. ಗಂಗವ್ವ ನೋಡಿದ ಕನ್ಯಾ ಮಗನಿಗೆ ಇಷ್ಟ ಆಗುತ್ತಿರಲಿಲ್ಲ. ಮಗ ಮನಸ್ಸಿನಲ್ಲಿ, "ನಾನೀಗ ಗೌರ್ನಮೆಂಟ್ ಲೆಕ್ಚರೆರ್ ಅದೀನಿ. ನಾಲ್ಕು ಜನ ನೋಡ್ದೋರು ಸೈ ಅನ್ನೊವಂಥ ಚಲುವೀನೆ ಕೈ ಹಿಡೀಬೇಕು. ಕೊನೇ ಪಕ್ಷ ಜತೆಯಲ್ಲಿ ಕೆಲಸ ಮಾಡೋ ಕಲೀಗ್ಸ್ ಚುಡಾಯಿಸಿ ನಗಂಗೂ ಇರಬಾರದು. ಕಾಲೇಜಿನ ನನ್ನ ಸ್ಟೂಡೆಂಟ್ಸ್ ಒಂದೊಮ್ಮೆ ನೋಡಿದರೂ 'ಮೇಷ್ಟ್ರಿಗೆ ಅನ್ಯಾಯ ಆಗಿಲ್ಲ. ಚಂದುಳ್ಳೀನೆ ಸಿಕ್ಯಾಳ ಬಿಡು' ಅಂತ ಸಮಾಧಾನ ಪಟ್ಟುಕೊಳ್ಳೋ ಹಂಗಿರಬೇಕು. ಆ ಮಾಜಿ ಪ್ರಿಯತಮೆ, 'ನೀನ್ ಅದ್ಯಾವ್ ವಿಸ್ವ ಸುಂದ್ರೀನ ಲಗ್ನ ಆಗ್ತೀಯೋ ನಾನು ನೋಡ್ತೀನಿ' ಎಂದು ನೊಂದು ಲಟಿಕೆ ಮುರಿದಿದ್ದಾಳೆ. ಅವಳೊಮ್ಮೆ ನೋಡಿದರೂ ಸೈ ಎಂದು ಸಂಕಟಪಡಬೇಕು. ಅಂತ ಪಗಡುದಸ್ತಾದ ಹುಡುಗಿನೇ ಲಗ್ನಾ ಆಗ್ಬೇಕು" ಎಂದು ಗುಡ್ಡಪ್ಪ ಫಕ್ಕೀರಪ್ಪ ಕುಟ್ರಿ ನಿಶ್ಚಯಿಸಿಕೊಂಡಿದ್ದ.

ತನಗಾಗಿ ಮದ್ವೆಯಾಗುತ್ತಿದ್ದೇನೆ ಅನ್ನೋದನ್ನ ಮರೆತು ಲೋಕಕಲ್ಯಾಣಕ್ಕಾಗಿ ತಾಳಿ ಕಟ್ಟುತ್ತಿದ್ದೇನೆಂದು ಭಾವಿಸಿದ್ದ. ಇಲ್ಲದ ಉಸಾಬರಿಗಳ ಕಲ್ಪಿಸಿಕೊಂಡು, ಸುಖಾಸುಮ್ಮನೆ ಹತ್ತಾರು ಬೇಲಿ ಸಾಲುಗಳ ಹೃದಯದಲ್ಲಿ ನೆಟ್ಟುಕೊಂಡು ಒದ್ದಾಡುತ್ತಿದ್ದನು. ಅಸಲಿಗೆ ಇವನು ಮದುವೆಯಾದರೂ, ಆಗದಿದ್ದರೂ, ಕೊನೆಗೆ ಎಕ್ಕುಟ್ಟಿ ಹೋದರೂ ಯಾರಿಗೂ ಆಗುವಂಥದ್ದು ಏನೂ ಇರಲಿಲ್ಲ. ಗಂಗವ್ವ ಬಿಟ್ಟರೆ ಯಾರೊಬ್ಬರೂ ಈ ಬಗ್ಗೆ ಕಿಂಚಿತ್ತೂ ತಲೆಕಡಿಸಿಕೊಂಡಿರಲಿಲ್ಲ.

ಆದರೂ ಒಮ್ಮೆ ಇವನಂಥ ಪ್ರಾಯದ ಹುಡುಗರ ಕಿಚಾಯಿಸುವ ಊರಿನ ಮಿಣ್ಣೆಬಸಜ್ಜ ಸಿಕ್ಕಿಬಿಟ್ಟ. ಅವನೋ ಊರಿಗೆ ಊರೇ ಕೇಳುವ ಲೌಡ್ ಸ್ಪೀಕರ್ ಗಂಟಲಲ್ಲಿ ತೂಗು ಹಾಕಿಕೊಂಡ ಮನುಷ್ಯ. "ಲೇ ಮಿಂಡ್ರಿ ಗುಡ್ಡಾ, ನೀ ಸಣ್ಣವ ಇದ್ದಾಗ ಅದೆಷ್ಟು ಹರೇದ ಹುಡುಗೇರು ಲಕಲಕಾಂತ ಓಡ್ಯಾಡಿಕೊಂಡು ಇಲ್ಲೇ ಸಾಯ್ತಿದ್ವಲ್ಲೋ. ಆಗ ಅವ್ವನ ಸೆರಗ ಬಿಟ್ಟು ಈಚೆಗೆ ಹೊಂಡದ ಮಗಾ ನೀನು. ಈಗ ಬೆದೆಗೆ ಬಿದ್ದೇನು. ಆಗ್ಲೆ ಬೇಲಿ ಹಾರಿದ್ರೆ ಪಾಡಿತ್ತೇನಪ್ಪ. ಈಗ ಎಷ್ಟಾನ ವಸಕಾಡು ಒಣಗೋದ ಉಳ್ಳಾಗೆಡ್ಡೀನೆ ನಿಂಗ್ ಸಿಗೋದು. ಏನ್ ಮಾಸ್ತ್ರಾ, ಆಗೀಯಂತ ನಿಮ್ಮವ್ವ ದೇವಲೋಕದ್ ರಂಭೆ, ಊರ್ವಸಿಯರ್ನೇ ಹಿಡಿಸಿ ತರಿಸಿತ್ತಾಳಂತೋ ಹೆಂಗೆ?" ಅಂಬೋ ಮಾತು ಗುಡ್ಡಪ್ಪ ಮನಸ್ಸಿಗೆ ನೋವು ತಂದಿತು. ಮಿಣ್ಣೆಬಸಜ್ಜ ರೇಗಿಸಲು ಹೀಗೆ ಹೇಳುತ್ತಾನೆಂದು ಗೊತ್ತಿದ್ದರೂ ಯಾಕೋ ಮಾತು ಹೃದಯಕ್ಕೆ ನಾಟಿ, ರಕ್ತನಾಳಕ್ಕಿಳಿಯಿತು.

ಈ ಅಕ್ಲಾಸದ ಮಾತುಗಳಿಗೇ ರೇಗಿ ಹೋದ ಗುಡ್ಡಪ್ಪ, "ಮದ್ವೆ ಆಗದಿದ್ದರೆ ಏನಾಗುತ್ತೆ? ಬ್ರಹ್ಮಚಾರಿಗಳೂ ಉಂಡಾಡಿಕೊಂಡು ಅಂದ್ವೆಂಗೋ ಸುಖವಾಗಿರ್ತಾರಂತಲ್ಲ. ಹಂಗೇ ಇದ್ದು